ಸ್ಥಾಪನೆ 1964

# ಕೃಷಿಮೇಳ 2021

ರೈತರ ಹಬ್ಬ

ಕೃಷಿಮೇಳ ಬುಲೆಟಿನ್ ★ 11ನೇ ನವೆಂಬರ್, 2021

ಕೃಷಿಮೇಳ–2021
ನವೆಂಬರ್ 11–14

## ಪ್ರಪ್ರಥಮ ಭಾರಿಗೆ ರೈತ ಮಹಿಳೆಯಿಂದ ಕೃಷಿಮೇಳಕ್ಕೆ ಚಾಲನೆ



ಕೃಷಿಮೇಳ–2021ರ ಉದ್ಘಾಟನಾ ಕಾರ್ಯಕ್ರಮ

ಹೊಸ ಚಿಗುರು ಹಳೆ ಬೇರೆ ಕೂಡಿರಲು ಮರ ಸೊಬಗು ಎಂಬಂತೆ ನಾಲ್ಕು ದಿನಗಳ ಕೃಷಿಮೇಳವನ್ನು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ 2021ರ ನವೆಂಬರ್ 11ರಂದು ಡಾ. ಎಸ್. ಅಯ್ಯಪ್ಪನ್, ಕುಲಾಧಿಪತಿಗಳು, ಕೇಂದ್ರ ವಿಶ್ವವಿದ್ಯಾಲಯ, ಇಂಪಾಲ್ ಹಾಗೂ ವಿಶ್ರಾಂತ ಮಹಾನಿರ್ದೇಶಕರು, ಭಾ.ಕೃ.ಅ.ಪ., ನವದೆಹಲಿ ಮತ್ತು ಮೈಸೂರು ಜಿಲ್ಲೆ ಹೆಚ್. ಡಿ. ಕೋಟೆ ತಾಲ್ಲೂಕಿನ ಹಾಡಿ ಮಹಿಳೆ ಶ್ರೀಮತಿ ಪ್ರೇಮ ಇವರು ಉದ್ಘಾಟಿಸಿದರು. ಡಾ. ಎಸ್. ಅಯ್ಯಪ್ಪನ್‌ರವರು ಎಲ್ಲಾ ಅನ್ನದಾತರಿಗೆ ಶುಭಾಶಯಗಳನ್ನು ಕೋರಿ ಕೇವಲ ಕ್ರೀಡೆ ಇನ್ನಿತರೆ ರಂಗದಲ್ಲಿ ಪ್ರಶಸ್ತಿಗಳು ಸಾಧನೆಗಳಲ್ಲದೆ ಕೃಷಿಯಲ್ಲೂ ಸಹ ರೈತರಿಗೆ ಪ್ರಶಸ್ತಿ–ಸನ್ಮಾನ–ಅಭಿನಂದನೆಗಳು ಲಭಿಸುವಂತಾಗಿದೆ ಎಂದರೆ ಅದಕ್ಕೆ ಕೃಷಿಮೇಳವೇ ಸಾಕ್ಷಿಯಾಗಿದೆ. ಜ್ಞಾನ ವಿಜ್ಞಾನ–ತಂತ್ರಜ್ಞಾನ–ಆವಿಶ್ಕಾರ ಎಲ್ಲವನ್ನು ಒಳಗೊಂದಿರುವುದೇ 'ಚತುರ ಕೃಷಿ' ಎಂದರು. ಈ ಸಮಾರಂಭದಲ್ಲಿ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿದ ನೂತನ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಮತ್ತು ಕೃಷಿ ಮಾಹಿತಿ ಒಳಗೊಂಡ 2022 ರ ಕ್ಯಾಲೆಂಡರ್‌ನ್ನು ಗಣ್ಯರು ಬಿಡುಗಡೆ ಮಾಡಿದರು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ವಹಿಸಿ ಮಾತನಾಡಿ ಪ್ರಶಸ್ತಿ ಪಡೆದ ರೈತ ಬಾಂಧವರಿಗೆ ಅಭಿನಂದನೆಗಳನ್ನು ತಿಳಿಸುತ್ತಾ ವಿಶ್ವವಿದ್ಯಾನಿಲಯವು 10 ಹೊಸ ತಳಿಗಳು ಹಾಗೂ 18 ಇತರೆ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದ್ದು, ರೈತರು ಇವುಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಸಾಗಬೇಕೆಂದರು. ಕಾರ್ಯಕ್ರಮದಲ್ಲಿ ಶ್ರೀ ಎಸ್.ಆರ್, ಉಮಾಶಂಕರ್, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ; ಶ್ರೀ ಶ್ರೀನಿವಾಸ್, ನಿರ್ದೇಶಕರು, ಕೃಷಿ ಇಲಾಖೆ; ವಿಶ್ವವಿದ್ಯಾನಿಲಯದ ಆಡಳಿತ ಮಂಡಳಿಯ ಸದಸ್ಯರಾದ ಡಾ. ಪಿ.ಹೆಚ್. ರಾಮಾಂಜಿನಿ ಗೌಡ, ಶ್ರೀ ಟಿ.ಎಂ. ಅರವಿಂದ್, ಶ್ರೀ ಓ.ಎಸ್. ದಯಾನಂದ, ಶ್ರೀ ಸುರೇಶ್ ಮಾರ್ಗದ್ ಮತ್ತು ಶ್ರೀ ಆರ್. ಶ್ರೀರಾಮ ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಭಾಗವಹಿಸಿದ್ದರು.



ಗಣ್ಯರಿಂದ ನೂತನ ತಳಿಗಳ–ತಂತ್ರಜ್ಞಾನಗಳು ಹಾಗೂ 2022ರ ಕ್ಯಾಲೆಂಡರ್ ಬಿಡುಗಡೆ

**ಕೃಷಿಮೇಳ 2021ರ ಘೋಷವಾಕ್ಯ :**
**ರೈತರ ಆದಾಯ ದ್ವಿಗುಣಗೊಳಿಸುವಿಕೆಗೆ ಕೃಷಿ ತಾಂತ್ರಿಕತೆಗಳು**

### ಭೌತಿಕ ಹಾಗೂ ಆನ್‌ಲೈನ್ ಕೃಷಿಮೇಳ

ಕೃಷಿ ಮೇಳವನ್ನು ಆನ್‌ಲೈನ್‌ನಲ್ಲಿ ವೀಕ್ಷಿಸಲು https://www.facebook.com/events/439856720816995/?ref=newsfeed ಅಥವಾ https://youtu.be/DmyNdEwZjcE ಲಿಂಕನ್ನು ಬಳಸಿ

ಮೊದಲನೆಯ ದಿನ ಭೌತಿಕವಾಗಿ 60 ಸಾವಿರಕ್ಕಿಂತ ಹೆಚ್ಚು ಹಾಗೂ ಆನ್‌ಲೈನ್‌ನಲ್ಲಿ 1.5 ಲಕ್ಷ ಜನರು ವೀಕ್ಷಿಸಿದ್ದಾರೆ

## ಕೃಷಿಮೇಳದಲ್ಲಿ ಪ್ರಗತಿಪರ ರೈತರಿಗೆ ಸನ್ಮಾನ


ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ಜಿಲ್ಲಾ ಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ


ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ತಾಲ್ಲೂಕು ಮಟ್ಟದ ಯುವ ರೈತರಿಗೆ ಪ್ರಶಸ್ತಿ ಪ್ರದಾನ

## ಜಿಲ್ಲಾ ಮಟ್ಟದ ಪ್ರಗತಿಪರ ರೈತ ಪ್ರಶಸ್ತಿ ಪುರಸ್ಕೃತರು

- ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಮಳ್ಳೂರು, ಜಂಗಮಕೋಟೆ ಹೋಬಳಿಯ ಶ್ರೀ ಎಂ.ಟಿ. ಮುನೇಗೌಡ ಮತ್ತು ಮರಸನಹಳ್ಳಿಯ ಶ್ರೀಮತಿ ಶಶಿಕಲಾರವರಿಗೆ ಕ್ರಮವಾಗಿ **ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯ ಪ್ರಶಸ್ತಿ**ಯನ್ನು ನೀಡಿ ಗೌರವಿಸಲಾಗಿದೆ
- ತುಮಕೂರು ಜಿಲ್ಲೆಯ ತುರುವೆಕೆರೆ ತಾಲ್ಲೂಕಿನ ಮೇಲಿನವಳಗೆರೆಹಳ್ಳಿಯ ಶ್ರೀ ರಂಗಸ್ವಾಮಿ ಮತ್ತು ಬೆಳಧರ ಗ್ರಾಮದ ಶ್ರೀಮತಿ ನಂದನ, ಎ. ಇವರಿಗೆ ಕ್ರಮವಾಗಿ **ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯ ಪ್ರಶಸ್ತಿ**ಯನ್ನು ಉದ್ಘಾಟನಾ ಸಮಾರಂಭದಲ್ಲಿ ನೀಡಿ ಗೌರವಿಸಲಾಗಿದೆ
- ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಯ ತಾಲ್ಲೂಕು ಮಟ್ಟದ ಪ್ರಗತಿಪರ ಯುವ ರೈತ ಮತ್ತು ರೈತ ಮಹಿಳೆಯರನ್ನು ಪುರಸ್ಕರಿಸಲಾಗಿದೆ
- ಅಪರಾಹ್ನದ ಕಾರ್ಯಕ್ರಮದಲ್ಲಿ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪ್ರಗತಿಪರ ರೈತರನ್ನು ಪುರಸ್ಕರಿಸಲಾಗಿದೆ







ಡಿಜಿಟಲ್ ಕಣ್ಣಲ್ಲಿ ಸೆರೆಯಾದ ಕೃಷಿಮೇಳ

## 12ನೇ ನವೆಂಬರ್, 2021 ಕಾರ್ಯಕ್ರಮಗಳು

- 2ನೇ ದಿನದ ಕೃಷಿಮೇಳದಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಮತ್ತು ರಾಮನಗರ ಜಿಲ್ಲೆಗಳ ಜಿಲ್ಲಾ ಮಟ್ಟದ ಅತ್ಯುತ್ತಮ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿ ಹಾಗೂ ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಹಾಗೂ ರೈತ ಮಹಿಳೆ ಪ್ರಶಸ್ತಿಗಳ ಪ್ರದಾನ
- ಇತ್ತೀಚಿಗೆ ಬಿಡುಗಡೆಯಾದ ನೂತನ ತಳಿಗಳ ಪ್ರಾತ್ಯಕ್ಷಿಕೆ, ನಿಖರ ಕೃಷಿ ಪ್ರಾತ್ಯಕ್ಷಿಕೆ, ಮಳಿಗೆಗಳಲ್ಲಿ ವಿವಿಧ ಕೃಷಿ ಯಂತ್ರೋಪಕರಣಗಳು ಮತ್ತು ತಂತ್ರಜ್ಞಾನಗಳ ಪ್ರದರ್ಶನ ಹಾಗೂ ರೈತರಿಗೆ ಅವಶ್ಯವಿರುವ ಸಲಹೆಗಳನ್ನು ನೀಡಲಾಗುವುದು


ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಯ ತಾಲ್ಲೂಕು ಮಟ್ಟದ ಯುವ ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ


ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಜಿಲ್ಲಾ ಮಟ್ಟದ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ